ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆ ಇಲಾಖೆ)

ಸಂಖ್ಯೆ:ಇ.ಜಿ–1/ಸಿಆರ್–04/2012–13

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
1ನೇ ಮುಖ್ಯ ರಸ್ತೆ, ಗಾಂಧಿನಗರ,
ಬೆಂಗಳೂರು–560009, ದಿನಾಂಕ: 31–07–2013

**ಅಧಿಸೂಚನೆ**

2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 35ರ ಉಪಪ್ರಕರಣ(1)ರ ಎರಡನೆಯ ಪರಂತುಕದೊಂದಿಗೆ 2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ನಿಯಮದಡಿಯ ನಿಯಮ 50ರ ಉಪನಿಯಮ(1) ರ ಕಂಡಿಕೆ(ಎ)ನ ಮೊದಲನೆಯ ಪರಂತುಕಗಳಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆ ಸಂಖ್ಯೆ:ಇ.ಜಿ–1/ಸಿಆರ್–04/2012–13, ದಿನಾಂಕ 27–04–2012ಅನ್ನು ರದ್ದುಪಡಿಸುತ್ತಾ ಈ ಮೂಲಕ ಅಧಿಸೂಚಿಸುವುದೇನೆಂದರೆ, 2013ರ ಸೆಪ್ಟಂಬರ್ ಮೊದಲನೆಯ ದಿನದಿಂದ ಅನ್ವಯವಾಗುವಂತೆ ಸದರಿ ಅಧಿನಿಯಮ ಅಥವಾ ನಿಯಮಗಳಡಿಯಲ್ಲಿ ಹತ್ತು ಸಾವಿರ ರೂಪಾಯಿಗಳಿಕ್ಕಿಂತ ಹೆಚ್ಚಿನ ಮೊತ್ತದ ತೆರಿಗೆ ಅಥವಾ ಯಾವುದೇ ಮೊಬಲಗು ಸಂದಾಯ ಮಾಡುವ ಸದರಿ ಅಧಿನಿಯಮದಡಿಯಲ್ಲಿ ನೋಂದಾಯಿತನಾದ ಪ್ರತಿಯೊಬ್ಬ ವ್ಯಾಪಾರಿಯು ಅಂತಹ ಮೊಬಲಗನ್ನು ಇಂಟರ್‌ನೆಟ್ ಮೂಲಕ ವಿದ್ಯುನ್ಮಾನ ಪಾವತಿ ರೂಪದಲ್ಲಿ ಈ ಕೆಳಕಂಡ ವಿಧಾನದಲ್ಲಿ ಸಂದಾಯ ಮಾಡತಕ್ಕದ್ದು.

i. ವಿದ್ಯುನ್ಮಾನ ಪಾವತಿ ಮಾಡಲು ಬಾಧ್ಯನಾದ ವ್ಯಾಪಾರಿಯು ಜಾಲತಾಣ (website) https://vat.kar.nic.in/epay ಅನ್ನು ತೆರೆಯಬೇಕು ಅಥವಾ ಜಾಲತಾಣ http://ctax.kar.nic.in ನಲ್ಲಿ ಇರುವ 'e-Payment (All Acts)' ಎನ್ನುವ ಸಂಪರ್ಕದ ಮೇಲೆ ಕ್ಲಿಕ್ ಮಾಡಬೇಕು. ಸದರಿ ಜಾಲತಾಣ ಮುಕ್ತ ಜಾಲತಾಣವಾಗಿದ್ದು ಬಳಕೆದಾರನ ಅಧಿಕೃತತೆಯ ಅವಶ್ಯವಿರುವುದಿಲ್ಲ.

ii. ಮುಖ್ಯ ಪರದೆಯ ಮೇಲೆ ಪ್ರದರ್ಶಿತವಾಗುವ ಒಂಬತ್ತು ತೆರಿಗೆಗಳ ಪಟ್ಟಿಯಲ್ಲಿ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮವನ್ನು ತೆರಿಗೆ ಪ್ರವರ್ಗವೆಂದಾಗಿ ಆಯ್ಕೆ ಮಾಡಿ ಅದರ ಮೇಲೆ ಕ್ಲಿಕ್ ಮಾಡಿ.

iii. ನಿಮ್ಮ TIN ನಮೂದಿಸಿರಿ. ಸಂಬಂಧಿತ ತಂತ್ರಾಂಶ ಸದರಿ TIN ನ ಸಿಂಧುತ್ವವನ್ನು ಖಚಿತಪಡಿಸಿಕೊಳ್ಳುತ್ತದೆ ಮತ್ತು ವ್ಯಾಪಾರಿಯ ವ್ಯವಹಾರದ ಹೆಸರು, ವಿಳಾಸ ಮತ್ತು ಅವನು/ಅವಳು ನೋಂದಾಯಿತರಾದ ಕಛೇರಿನಂತಹ ವಿವರಗಳು ತಂತಾನೇ ಪ್ರದರ್ಶಿತವಾಗುತ್ತವೆ.

iv. ತೆರಿಗೆ ಅವಧಿ, ತೆರಿಗೆ ಅಥವಾ ಇತರೆ ಮೊತ್ತ, ಬಡ್ಡಿ, ದಂಡ ಮುಂತಾದ ವಿವರಗಳನ್ನು ನಿಗದಿ ಮಾಡಿರುವ ಸಂಬಂಧಿತ ಆವರಣಗಳಲ್ಲಿ ನಮೂದಿಸಿ.

v. ವ್ಯಾಪಾರಿಯು ನೆಟ್ ಬ್ಯಾಂಕಿನ ಸೌಲಭ್ಯವಿರುವ ಖಾತೆ ಹೊಂದಿದ ಮತ್ತು ಇ–ಪಾವತಿಗೆ ಸಮರ್ಥಗೊಳಿಸಿದ ಬ್ಯಾಂಕ್‌ಗಳಲ್ಲಿ ಒಂದನ್ನು ಜಾರುಪಟ್ಟಿ (Drop down list) ಯಿಂದ ಆಯ್ಕೆ ಮಾಡಿ ಮತ್ತು 'NEXT' ಎನ್ನುವುದರ ಮೇಲೆ ಕ್ಲಿಕ್ ಮಾಡಿ.

vi. ಗಣಕಯಂತ್ರದ ಮುಖ್ಯ ಪರದೆಯ ಮೇಲೆ ಪ್ರದರ್ಶಿತವಾಗುವ ವಿವರಗಳನ್ನು ಪರಿಶೀಲಿಸಿ ಮತ್ತು ಅಂತಹ ವಿವರಗಳನ್ನು ಧೃಢೀಕರಿಸಿಕೊಂಡ ನಂತರ ,' submit' ಎನ್ನುವುದರ ಮೇಲೆ ಕ್ಲಿಕ್ ಮಾಡಿ. ಈ ವಿವರಗಳನ್ನು ಗಣಕಯಂತ್ರ ವ್ಯವಸ್ಥೆ ದಾಖಲಿಸುತ್ತದೆ ಹಾಗೂ ವಾಣಿಜ್ಯ ತೆರಿಗೆ ಇಲಾಖೆಯ ಉಲ್ಲೇಖ ಸಂಖ್ಯೆ (CTD Reference Number) ಎಂದು ಕರೆಯಲಾಗುವ ಒಂದು ವಿಶಿಷ್ಟ ಸಂಖ್ಯೆ ಉತ್ಪಾದನೆ ಆಗಿ ಪ್ರದರ್ಶಿತವಾಗುತ್ತದೆ. ಈ ವಿಶಿಷ್ಟ ಸಂಖ್ಯೆಯನ್ನು ಭವಿಷ್ಯದ ಬಳಕೆಗಾಗಿ ಬರೆದಿಟ್ಟುಕೊಳ್ಳತಕ್ಕದ್ದು.

vii. ನಂತರ ಗಣಕಯಂತ್ರ ವ್ಯವಸ್ಥೆಯು ನಮೂದಿತ ಪಾವತಿ ಮೊತ್ತದ ವಿವರಗಳನ್ನು ಆಯ್ಕೆ ಮಾಡಿದ ಬ್ಯಾಂಕ್‌ನ ಜಾಲತಾಣಕ್ಕೆ ವರ್ಗಾಯಿಸುತ್ತದೆ ಮತ್ತು ಆ ಬ್ಯಾಂಕ್‌ನ ಜಾಲತಾಣವನ್ನು ತೆರೆಯುತ್ತದೆ.

viii. ಬ್ಯಾಂಕಿನ ಜಾಲತಾಣದ ಸಂಪರ್ಕ ಪುಟವು ತೆರೆದುಕೊಳ್ಳುತ್ತದೆ. ವ್ಯಾಪಾರಿಯು ತನ್ನ ವಿವರಗಳನ್ನು ಮತ್ತು ಅಂತಹ ಬ್ಯಾಂಕ್ ಒದಗಿಸಿದ 'ಬಳಕೆದಾರನ ಹೆಸರು' ಮತ್ತು 'ಸಂಕೇತ ಪದ'ಗಳನ್ನು ಉಪಯೋಗಿಸಿ ಅದನ್ನು ಅಧಿಕೃತಗೊಳಿಸತಕ್ಕದ್ದು.

ix. ಈಗ ಬ್ಯಾಂಕಿನ ಜಾಲತಾಣವು ''ತೆರಿಗೆ ಪ್ರವರ್ಗ", "ಟಿನ್" (TIN), "ವಾಣಿಜ್ಯ ತೆರಿಗೆ ಇಲಾಖೆಯ ಉಲ್ಲೇಖ ಸಂಖ್ಯೆ" (CTD Reference Number) ಮತ್ತು "ಮೊಬಲಗು" (Amount) ಗಳನ್ನು ಪ್ರದರ್ಶಿಸುತ್ತದೆ. ಈ ಹಂತದಲ್ಲಿ ಪಾವತಿ ವಿವರಗಳನ್ನು ಮಾರ್ಪಾಡು ಮಾಡಲು ಅವಕಾಶವಿರುವುದಿಲ್ಲ.

x. 'Confirm the Payment' ಎನ್ನುವುದರ ಮೇಲೆ ವ್ಯಾಪಾರಿ ಕ್ಲಿಕ್ ಮಾಡಿದ ನಂತರ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವಹಿವಾಟು ಕೈಗೊಳ್ಳಲಾಗುತ್ತದೆ.

xi. ಪಾವತಿ ಪ್ರಕ್ರಿಯೆ ಪೂರ್ಣಗೊಂಡ ನಂತರ, ಬ್ಯಾಂಕಿನ ಜಾಲತಾಣದ ಸಂಪರ್ಕ ವಾಣಿಜ್ಯ ತೆರಿಗೆ ಇಲಾಖೆಯ ಜಾಲತಾಣಕ್ಕೆ ವರ್ಗಾಯಿಸಲ್ಪಡುತ್ತದೆ. ಬ್ಯಾಂಕ್ ಉಲ್ಲೇಖ ಸಂಖ್ಯೆಯನ್ನು ಒಳಗೊಂಡಂತೆ ಯಶಸ್ವಿ ಪಾವತಿಯ ವಿವರಗಳನ್ನು ಜಾಲತಾಣ https://vat.kar.nic.in/epay ಪ್ರದರ್ಶಿಸುತ್ತದೆ.

xii. 'ಪ್ರಿಂಟ್ ಚಲನ್' (Print Challan) ಎಂಬುದರ ಮೇಲೆ ಕ್ಲಿಕ್ ಮಾಡಿ ಮುದ್ರಿತ ಚಲನ್‌ನ್ನು ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಾಲತಾಣ https://vat.kar.nic.in/epay ನಲ್ಲಿ ಅಳವಡಿಸಿದ ಬಳಕೆದಾರರ ಕೈಪಿಡಿಯನ್ನು ನೋಡಬಹುದು.

(ಅಜಯ್ ಸೇಠ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.